ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಟಿಪ್ಪಣಿ ಹಾಳೆ

ಮಟದ ಸಂಖ್ಯೆ: .....

ಕಡತದ ಸಂಖ್ಯೆ: .....

ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
29	ಮುಂದುವರೆದು, ಆರ್ಥಿಕ ಬಿಡ್ನ್ನು ತೆರೆಯಲಾಗಿದ್ದು, ಆರ್ಥಿಕ ಬಿಡ್‌ನಲ್ಲಿ ಎಲ್-1 ಗುತ್ತಿಗೆದಾರರರಾದ ಶ್ರೀ. ಶಿವಣ್ಣ ರವರು ಶೇ.-39.00% ರಷ್ಟು ಕಡಿಮೆ ದರ ನಮೂದಿಸಿದ್ದು, ಇದು ಅತ್ಯಂತ ದೊಡ್ಡ ಮಟ್ಟದ ಕಡಿಮೆ ದರವಾಗಿರುವುದರಿಂದ ಉದ್ಯಾನವನಗಳನ್ನು ಸಮರ್ಪಕವಾಗಿ ನಿರ್ವಹಿಸಲು ಸಾಧ್ಯವಾಗುವುದಿಲ್ಲ. ಅದಲ್ಲದೆ ಸದರಿ ಬಿಡ್ದುದಾರರು ಈ ಹಿಂದೆ ಇದೇ ರೀತಿ ಅತ್ಯಂತ ಕಡಿಮೆ ದರಗಳನ್ನು ನಮೂದಿಸಿ ನಿರ್ವಹಣೆ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸದ ಕಾರಣ ಅರಣ್ಯ ಇಲಾಖೆಯಲ್ಲಿ ಮರು ಟೆಂಡರ್ ಕರೆದಿರುವುದರಿಂದ ಸದರಿ ಟೆಂಡರ್‌ನ್ನು ರದ್ದುಪಡಿಸಿ ಮರು ಟೆಂಡರ್ ಕರೆಯಲು ಅನುಮೋದನೆಗಾಗಿ ಹಿ.ಸ.ತೋ.ನಿ(ರಾರಾನವ) ರವರು ಕೋರಿರುವುದನ್ನು ತಮ್ಮ ಮುಂದಿನ ಆದೇಶಕ್ಕಾಗಿ ಸಲ್ಲಿಸಿದೆ. 27/5/25 30 ಮುಖ್ಯ ಅಭಿಯಂತರರು(ರಾರಾನವ) Discuss 27/5/2025 31) SADH (RRN) ಕಂಡಿಕೆ (30)ರ ತಮ್ಮ ಸೂಚನೆ ಮೇರೆಗೆ ತಮ್ಮೊಂದಿಗೆ ಚರ್ಚಿಸಲಾಗಿ ಉದ್ಯಾನವನದ ವಾರ್ಷಿಕ ನಿರ್ವಹಣೆಯಲ್ಲಿ ಕಳೆತೆಗೆಯುವುದು, ಗಿಡಗಳ ಸುತ್ತಾ ಪಾತಿ ಮಾಡುವುದು, ಪ್ರತಿನಿತ್ಯ ಪಾತ್‌ವೇ ಗುಡಿಸುವುದು, ಗಿಡಗಳಿಗೆ ನೀರು ಹಾಕುವುದು, ಎಡ್ಜಸ್ ಅನ್ನು ಟ್ರಿಮ್ಮಿಂಗ್ ಮಾಡುವುದು, ಶೇಪಿಂಗ್ ಮಾಡುವುದು, ಕಸ ತೆಗೆಯುವುದು ಇತ್ಯಾದಿ ಬಹುತೇಕ ಕೆಲಸಗಳನ್ನು ಕೂಲಿ ಕಾರ್ಮಿಕರೇ ನಿರ್ವಹಿಸಬೇಕಾಗಿರುತ್ತದೆ. ಆದ್ದುದರಿಂದ ಬಿಡ್ದುದಾರರು ಶೇ.39.00% ರಷ್ಟು ಅತ್ಯಂತ ಕಡಿಮೆ ದರ ನಮೂದಿಸಿರುವುದರಿಂದ ಕನಿಷ್ಟ ಕೂಲಿ ನೀಡಲು ಸಾಧ್ಯವಾಗುವುದಿಲ್ಲ. ಇದನ್ನು ನಿಭಾಯಿಸಲು ಕಡಿಮೆ ಕೂಲಿಕಾರರನ್ನು ಗುತ್ತಿಗೆದಾರರು ನೇಮಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಇದರಿಂದ ಸಮರ್ಪಕವಾಗಿ ಉದ್ಯಾನವನವನ್ನು ನಿರ್ವಹಿಸಲು ವಿಫಲರಾಗುತ್ತಾರೆ. ಆದ್ದುದರಿಂದ ದಯಮಾಡಿ ಮರು ಟೆಂಡರ್ ಕರೆಯಲು ಅನುಮೋದನೆಗಾಗಿ ಕಡತವನ್ನು ಮಂಡಿಸಿದೆ. ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರು ರಾಜರಾಜೇಶ್ವರಿನಗರ ವಲಯ 32) ಮುಖ್ಯ ಅಭಿಯಂತರರು ರಾರಾನಗರ ವಲಯ ಮುಂದಿನಂತೆ. 27/5/2025 Chief Engineer Rajarajeshwarinagar Zone Bruhath Bangalore Mahanagara Palike